ಕಥೆ

# ಮಧ್ಯರಾತ್ರಿಯ ಪ್ರಾರ್ಥನೆ




**ಮೂಲ: ಜೊಯಕಿಮ್ ಮಾರಿಯಾ ಮಿಶಾಡೊ ಡಿ ಅಸೀಸ್**
**ಕನ್ನಡಕ್ಕೆ: ಎಂ.ಎಸ್. ಶ್ರೀರಾಮ್**
ಕಲೆ: ವಿಶ್ವನಾಥ್ ಎ.ಎಸ್.

ಅನೇಕ ವರ್ಷಗಳ ಹಿಂದೆ, ನನಗೆ ಹದಿನೇಳು ಮತ್ತು ಈ ಮಹಿಳೆಗೆ ಮೂವತ್ತು ವರ್ಷಗಳಾಗಿದ್ದಾಗ ಆದ ಮಾತುಕತೆಯ ಆಯಾಮಗಳು ನನಗೆ ಇನ್ನೂ ಅರ್ಥವಾಗಿಲ್ಲ. ಅವತ್ತು ಕ್ರಿಸ್‌ಮಸ್‌ನ ಪೂರ್ವ ಸಂಜೆಯಾಗಿತ್ತು. ರಾತ್ರೆಯವರೆಗೆ ಎಚ್ಚರವಿದ್ದು ಪ್ರಾರ್ಥನೆಯ ವೇಳೆಗೆ ನೆರೆಮನೆಯವನನ್ನು ಎಬ್ಬಿಸಿ ಇಬ್ಬರೂ ಜೊತೆಯಾಗಿ ಮಧ್ಯರಾತ್ರಿಯ ಪ್ರಾರ್ಥನೆಗೆ ಹೋಗುವ ಏರ್ಪಾಟನ್ನು ಮಾಡಿದ್ದೆ.

ನಾನು ನೋಟರಿ ಕೆಲಸ ನಿರ್ವಹಿಸುವ ಮನೇಸಿಸ್‌ನ ಎರಡಂತಸ್ತಿನ ಮನೆಯಲ್ಲಿದ್ದೆ. ಅವನ ಮೊದಲ ಹೆಂಡತಿ ನನ್ನ ಸೋದರಸಂಬಂಧಿಯಾಗಿದ್ದಳು. ನಾನಿಲ್ಲಿಗೆ ಹಲವು ತಿಂಗಳುಗಳ ಹಿಂದೆ ಬಂದಾಗ ಅವನ ಎರಡನೇ ಹೆಂಡತಿ ಕೊನ್ಸಸಾಂವ್ ಮತ್ತು ಆಕೆಯ ತಾಯಿ ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡಿದ್ದರು. ನನ್ನ ಕಾಲೇಜಿನ ಪ್ರವೇಶ ಪರೀಕ್ಷೆಯ ತಯಾರಿಗಾಗಿ ಮಂಗರಚೀಬಾದಿಂದ ರಿಯೋ ಡಿ ಜನೇರೊಕ್ಕೆ ಬಂದಿದ್ದೆ. ಆ ಮನೆಯಲ್ಲಿ ಶಾಂತವಾಗಿ ನನ್ನ ಪಾಡಿಗೆ ನಾನು ಪುಸ್ತಕಗಳ ನಡುವೆ ಇರುತ್ತಿದ್ದೆ. ಅಲ್ಲಿ ಕೆಲವೇ ಪರಿಚಿತರಿದ್ದರು. ಯಾವಾಗಲಾದರೊಮ್ಮೆ ವಾಕ್ ಹೋಗುತ್ತಿದ್ದೆ. ಅವರ ಸಂಸಾರ ಚಿಕ್ಕದಾಗಿತ್ತು – ನೋಟರಿ, ಅವನ ಹೆಂಡತಿ, ಅತ್ತೆ, ಮತ್ತಿಬ್ಬರು ಹೆಣ್ಣಾಳುಗಳು. ಅವರದ್ದು ಹಳೇಕಾಲದ ಕುಟುಂಬ. ರಾತ್ರೆ ಹತ್ತಕ್ಕೆ ಎಲ್ಲರೂ ಮಲಗುವ ಕೋಣೆ ಸೇರುತ್ತಿದ್ದರು. ಹತ್ತೂವರೆಗೆ ಇಡೀ ಮನೆ ನಿದ್ರೆಯ ಪಾಲಾಗುತ್ತಿತ್ತು.

ಮನೇಸಿಸ್ ರಂಗಮಂದಿರಕ್ಕೆ ಹೋಗುತ್ತಾನೆನ್ನುವುದನ್ನು ನಾನು ಆಗಾಗ ಕೇಳುತ್ತಿದ್ದೆ. ನಾನು ಯಾವತ್ತೂ ರಂಗಮಂದಿರಕ್ಕೆ ಹೋಗಿರಲಿಲ್ಲ. ನನ್ನನ್ನೂ ಜೊತೆಗೊಯ್ಯಬೇಕೆಂದು ಹಲವು ಬಾರಿ ಕೇಳಿದ್ದೆ. ಈ ಮಾತು ಹೇಳಿದಾಗೆಲ್ಲ ಅತ್ತೆ ಮುಖ ಕಿವುಚುತ್ತಿದ್ದಳು, ಹೆಣ್ಣಾಳುಗಳು ಕೀಚುದನಿಯಲ್ಲಿ ಗೊಣಗುತ್ತಿದ್ದರು. ಮನೇಸಿಸ್ ಏನೂ ಅನ್ನುತ್ತಿರಲಿಲ್ಲ. ಒಳ್ಳೆಯ ಬಟ್ಟೆ ತೊಟ್ಟು ಆಚೆ ಹೋದವನು ಮಾರನೆಯ ಬೆಳಗ್ಗೆ ವಾಪಸ್ಸಾಗುತ್ತಿದ್ದ. ಆಮೇಲೆ ಗೊತ್ತಾಗಿದ್ದೇನೆಂದರೆ: ಗಂಡನನ್ನು ಬಿಟ್ಟಿದ್ದ ವಿವಾಹಿತ ಹೆಂಗಸಿನ ಜೊತೆ ಮನೇಸಿಸ್‌ನ ಸಂಬಂಧವಿದ್ದು ವಾರಕ್ಕೊಂದು ರಾತ್ರೆ ಆಕೆಯ ಜೊತೆ ಕಳೆಯುತ್ತಿದ್ದ, ಹೀಗಾಗಿ ರಂಗಮಂದಿರ ಒಂದು ನೆಪಮಾತ್ರ ಅಂತ. ಕೊನ್ಸಸಾಂವ್ ದುಃಖಪಟ್ಟರೂ